

**ಸಲಿಂಗಿಗಳಿಗೂ ಬದ್ಧ ಸಂಗಾತಿಯ ಜೊತೆ ದೀರ್ಘ ದಾಂಪತ್ಯ ಬೇಕು. ಇದರಿಂದ ಸಂತೃಪ್ತಿ ಹೆಚ್ಚಾಗಿ ಆಯಸ್ಸು ಹೆಚ್ಚುತ್ತದೆ.**

ಡಾ.ವಿನೋದ ಛೆಬ್ಬಿ

# 115: ಸಲಿಂಗಿಯ ದಾಂಪತ್ಯ–3

ಮದುವೆಯಾದ ಸಲಿಂಗಿಯು ಹೆಂಡತಿಗೆ ಸುಖ ಕೊಡಬೇಕೆನ್ನುವ ಉದ್ದೇಶದಿಂದ ತನ್ನ ಬಯಕೆಯ ವಿರುದ್ಧ ತನ್ನನ್ನು ತಯಾರು ಮಾಡಬೇಕೆಂದು ಒತ್ತಾಯಿಸುತ್ತಿದ್ದಾನೆ. ಅವನ ದ್ವಂದ್ವ ಭಾವದ ಬಗೆಗೆ ಹೋದಸಲ ಮಾತಾಡುತ್ತಿದ್ದೆವು.

ಅಷ್ಟರಲ್ಲಿ ಸಲಿಂಗಿಯು ಇನ್ನೊಂದು ಮಾಹಿತಿ ಮುಂದಿಟ್ಟ. 'ಮುಂಚೆ ಇಂಟರ್‌ನೆಟ್‌ನಲ್ಲಿ ಸಲಿಂಗಕಾಮ ಇರುವ ಬ್ಲೂ ಫಿಲ್ಮ್‌ಗಳನ್ನು ದಿನಾಲೂ ನೋಡುವ ಗೀಳು ಅಂಟಿಕೊಂಡಿತ್ತು. ಅದು ತಪ್ಪೆಂದು ಅರಿವಾಗಿ ಬಿಟ್ಟುಬಿಟ್ಟೆ. ಸಲಿಂಗಕಾಮದ ಚಿತ್ರಗಳನ್ನು ನೋಡಿದ್ದರಿಂದಲೇ ಸಲಿಂಗಿಯಾದೆ ಎಂದು ಇಂಟರ್‌ನೆಟ್ ಸಂಪರ್ಕ ಕಿತ್ತುಹಾಕಿದೆ. ಮದ್ಯವ್ಯಸನಕ್ಕೆ ಇರುವಂತೆ ಸಲಿಂಗಕಾಮದಿಂದ ಹೊರಬರುವುದಕ್ಕೂ ಟ್ರೀಟ್‌ಮೆಂಟ್...' ಎಂದು ಸ್ವರ ತೇಲಿಸಿದ.

ನೀಲೀ ಚಿತ್ರಗಳ ಬಗೆಗಿನ ಗೀಳನ್ನು ಗೀಳು ಎಂದು ಒಪ್ಪಬೇಕಾದದ್ದೆ. (ನೀಲಿ ಚಿತ್ರದ ಗೀಳು ವ್ಯಕ್ತಿಯ ಕಾಮಸಂಬಂಧಗಳ ಮೇಲೆ ಬೀರುವ ಪ್ರಭಾವದ ಬಗೆಗೆ ಇನ್ನೊಮ್ಮೆ ತಿಳಿಯೋಣ.) ಆದರೆ ಇವನು ಹೇಳುತ್ತಿರುವುದೇ ಬೇರೆ. ಸಲಿಂಗಕಾಮದ ನೀಲಿ ಚಿತ್ರಗಳನ್ನು ವೀಕ್ಷಿಸಿದ್ದರಿಂದ ಸಲಿಂಗಕಾಮ ಹರಳುಗಟ್ಟಿತು ಎಂದು ತಿಳಿದಿದ್ದಾನೆ. ಗೀಳಿನಿಂದ ಹೊರಬಂದರೆ ಸಲಿಂಗಕಾಮದಿಂದಲೂ ಹೊರಬರಬಹುದು ಎಂದುಕೊಂಡಿದ್ದಾನೆ. ವಾಸ್ತವ ಏನೆಂದರೆ, ಸಲಿಂಗಕಾಮದ ಚಿತ್ರಗಳನ್ನು ವೀಕ್ಷಿಸುವುದರಿಂದ ಸಲಿಂಗಕಾಮ ಹರಳುಗಟ್ಟುವುದಿಲ್ಲ, ಬದಲಾಗಿ ಸಲಿಂಗಕಾಮಕ್ಕೆ ಪಕ್ಕಾಗಿರುವುದರಿಂದ ತನಗೆ ಇಷ್ಟವಾದ ಕಾಮೋತ್ತೇಜಕ ಚಿತ್ರಗಳನ್ನು ಆರಿಸಿಕೊಂಡಿದ್ದಾನೆ ಎಂದು ತಿಳಿಸಿಹೇಳಿದೆ. ಅಷ್ಟಲ್ಲದೆ ನೀಲಿಚಿತ್ರ ವೀಕ್ಷಣೆ ನಿಲ್ಲಿಸಿ ಸುಮಾರು ಕಾಲವಾಯಿತು, ಹಾಗಾಗಿ ಗೀಳೆಲ್ಲಿದೆ? ಇಲ್ಲೊಂದು ವಿಷಯ ಹೇಳಲೇಬೇಕು: ಅನೇಕರು ಸಲಿಂಗಕಾಮವು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಎಂದು ತಪ್ಪು ತಿಳಿದಿದ್ದಾರೆ. ನಮ್ಮ ಪುರಾಣಗಳಲ್ಲಿ ಸಲಿಂಗ ಸಂಬಂಧದ ಬಗೆಗೆ ಸಾಕಷ್ಟು ಉಲ್ಲೇಖಗಳಿವೆ (ಉದಾ. ಹರಿಹರರ ಸಮ್ಮಿಲನದಿಂದ ಹುಟ್ಟುವ ಅಯ್ಯಪ್ಪನ್) ನಮ್ಮ ಪ್ರಾಚೀನ ದೇವಾಲಯಗಳ ಶಿಲ್ಪಗಳಲ್ಲಿ ಸಲಿಂಗಕಾಮದ ಕೆತ್ತನೆಗಳಿವೆ. ಇವೆಲ್ಲ ಸಲಿಂಗ ಕಾಮದ ಪ್ರಾಚೀನತೆಯನ್ನು ಎತ್ತಿತೋರಿಸುತ್ತವೆ ಎಂದು ಬಿಂಬಿಸಲು ಯತ್ನಿಸಿದೆ. ಮಾತು ಸುತ್ತು ಬಳಸಿ ಅವನ ಇಬ್ಬಂದಿತನಕ್ಕೇ ಮರಳಿತು. ಅದಕ್ಕೇ ನೇರವಾಗಿ ಕೇಳಿದೆ.

'ಒಂದುಕಡೆ ಸಲಿಂಗಕಾಮ ಸ್ವಭಾವವೆಂದು ಅನುಭವಿಸುವವರೂ ನೀವೇ, ಇನ್ನೊಂದು ಕಡೆ ಈ ವರ್ತನೆಯನ್ನು ವಿರೋಧಿಸುವವರೂ ನೀವೇ ಆಗಿದ್ದೀರಿ. ಗೆರೆಯ ಎರಡೂ ಕಡೆ ಒಬ್ಬರೇ ನಿಂತು ಹಗ್ಗ ಎಳೆದಾಡುತ್ತಿದ್ದೀರಿ. ಗೆಲುವು ಒಂದು ಕಡೆಗೆ ಮಾತ್ರ ಸಾಧ್ಯವಲ್ಲವೆ?' ಎಂದೆ. ಆದರೂ ಅವನ ತೊಳಲಾಟ ನಿಲ್ಲಲಿಲ್ಲ. ಇಲ್ಲಿ ತರ್ಕ, ತಿಳಿವಳಿಕೆ, ಮಾಹಿತಿ ಯಾವುದೂ ಕೆಲಸಕ್ಕೆ ಬರುತ್ತಿಲ್ಲ. ಹಾಗಾಗಿ ಅವನದೇ ಅನುಭವದ ಪ್ರಯೋಜನ ಪಡೆಯಲು ನಿರ್ಧರಿಸಿದೆ.

'ಸ್ವಲ್ಪ ಹೊತ್ತು ಇದೆಲ್ಲ ಪಕ್ಕಕ್ಕಿಟ್ಟು ನನ್ನ ಒಂದೇ ಒಂದು ಪ್ರಶ್ನೆಗೆ ಉತ್ತರ ಕೊಡುತ್ತೀರಾ?' ಎಂದೆ. ಅವನು ನನ್ನತ್ತ ಗಮನಕೊಟ್ಟ ನಂತರ ಕೇಳಿದೆ: 'ನಿಮಗೆ ಇಲ್ಲಿಯ ತನಕ ಅತ್ಯುತ್ಕೃಷ್ಟವಾದ ಲೈಂಗಿಕ ಅನುಭವ ಯಾವಾಗ ಆಗಿತ್ತು? ನೆನಪಿಸಿಕೊಳ್ಳಿ' ಆತನ ಮುಖದ ತುಂಬ ತೃಪ್ತಿಯ ಬೆಳದಿಂಗಳು ಹರಡಿತು. 'ಆ ಮಧ್ಯವಯಸ್ಕನೊಂದಿಗೆ ಕೆಲವು ವರ್ಷ ಅನುಭವಿಸಿದೆನಲ್ಲ, ಅದೆಲ್ಲ ಬೊಂಬಾಟಾಗಿತ್ತು!' ಇತ್ತೀಚೆಗೆ ಹಾಗಾಗಿತ್ತೆ ಎಂದುದಕ್ಕೆ ಒಮ್ಮಿಂದೊಮ್ಮೆಲೇ ಗಂಭೀರನಾಗಿ ಸುಮ್ಮನಾದ. ಆಮೇಲೆ ಹಂಚಿಕೊಂಡ. ನಂತರ ಆಕಸ್ಮಿಕವಾಗಿ ಸಿಕ್ಕ 10–15 ಸಂಗಾತಿಗಳ ಜತೆಗೆ ಶರೀರ ತಣಿದಿದ್ದೇನೋ ನಿಜ. ಆದರೆ ಆ ಮಧ್ಯ ವಯಸ್ಕನೊಂದಿಗೆ ಆದ ಅನುಭವಕ್ಕೆ ಏನೇನೂ ಸರಿಸಾಟಿಯಲ್ಲ ಎಂದ. ಸಂಗಾತಿಯನ್ನು ಕಳೆದುಕೊಂಡ ವ್ಯಥೆ ಅವನ ತೇವವಾದ ಕಣ್ಣುಗಳಿಂದ ಇಣುಕಿತು.

ಇಲ್ಲಿ ನಾವೆಲ್ಲ ತಿಳಿಯಬೇಕಾದ ಸಂಗತಿ ಒಂದಿದೆ. ಹೆರಲಿಂಗಿಗಳಂತೆ ಸಲಿಂಗಕಾಮಿಗಳೂ ತಮ್ಮ ಸಂಗಾತಿಯನ್ನು ಪ್ರೀತಿಸಲು ಇಷ್ಟಪಡುತ್ತಾರೆ. ಅವರೊಡನೆ ಪ್ರೇಮಪ್ರಕರಣದಲ್ಲಿ ಒಳಗೊಳ್ಳಲು, ಕಾಯಮ್ಮಾಗಿ ಸಂಬಂಧ ಇಟ್ಟುಕೊಳ್ಳಲು ಬಯಸುತ್ತಾರೆ. ಹಾಗೆಯೇ, ಪ್ರೇಮಿಯು ಅಗಲಿದಾಗ ದೇವದಾಸನಾಗಿ ವಿರಹ, ಒಂಟಿತನ, ಖಿನ್ನತೆ ಅನುಭವಿಸುತ್ತಾರೆ. ಸಲಿಂಗಿಗಳಿಗೂ ಬದ್ಧ ಸಂಗಾತಿಯೊಡನೆ ದೀರ್ಘ ದಾಂಪತ್ಯ ಇಷ್ಟ – ಇದರಿಂದ ಸಂತೃಪ್ತಿಯು ಹೆಚ್ಚಾಗಿ, ಹೆಚ್ಚು ವರ್ಷ ಆರೋಗ್ಯದಿಂದ ಬದುಕುತ್ತಾರೆ ಎಂದು ಸಂಶೋಧನೆಗಳು ತಿಳಿಸುತ್ತವೆ. ಹಾಗೆಯೇ ಸಲಿಂಗಿಗಳು ಸಂಗಾತಿಯನ್ನು ಉಳಿಸಿಕೊಳ್ಳಲು ಯಾವ ಹಂತಕ್ಕೂ ಹೋದದ್ದಿದೆ. ನಾನು ಕಂಡ ಒಬ್ಬ ಪ್ರತಿಷ್ಠಿತ ಪುರುಷ ಸಲಿಂಗಿಯು ತನಗಿಂತ ಚಿಕ್ಕವನೊಡನೆ ಏಳೆಂಟು ವರ್ಷ ಕಾಮ ಸಂಬಂಧ ಇಟ್ಟುಕೊಂಡ. ಸಮಾಜಕ್ಕೆ ಹೆದರಿ ತನ್ನ ನಿಲುವನ್ನು ಮುಚ್ಚಿಟ್ಟು ಮದುವೆಯಾದ. ಹೆಂಡತಿಯ ಜತೆ ಮಲಗಲು ತನ್ನ ಸಲಿಂಗಿ ಪ್ರೇಮಿಯನ್ನೇ ಒತ್ತಾಯಿಸಿದ. ಹೆಂಡತಿಯು ಅದನ್ನು ಒಪ್ಪದೆ ವಿಷಯ ಬಯಲಿಗೆ ತರಲು ಹೊರಟಾಗ ಅವಳನ್ನು ಕೊಲ್ಲಲೂ ಯತ್ನಿಸಿದ. ಆಕೆ ಕೂದಲೆಳೆಯ ಅಂತರದಲ್ಲಿ ಪಾರಾಗಿ ದೂರವಾದಳು. ಅವನ ಕ್ರೌರ್ಯವನ್ನು ಕಂಡು ಪ್ರೇಮಿಯು ದೂರವಾದಾಗ ಅವನು ವರ್ಷಗಟ್ಟಲೆ ಸಂತಾಪ, ಖಿನ್ನತೆ ಅನುಭವಿಸಿದ.

ಇದೆಲ್ಲ ನೆನಪಾಗಿ ಸಲಿಂಗಿಯನ್ನು ಅನುಕಂಪದಿಂದ ನೋಡುತ್ತ ಹೇಳಿದೆ. 'ಛೆ, ನಿಮ್ಮ ಪ್ರೇಮಿಯನ್ನು ಕಳೆದುಕೊಂಡು ಎಷ್ಟೊಂದು ವ್ಯಥೆ ಪಡುತ್ತಿದ್ದೀರಿ. ಒಂದುವೇಳೆ ಆತನೊಡನೆ ಕಾಯಂ ಆಗಿ ಬಾಳುವಂತಿದ್ದರೆ ಹೇಗಿರುತ್ತಿತ್ತು?' ಅವನ ಮುಖ ಅರಳಿತು. 'ಹಾಗೆಯೇ, ಸಮಾಜವು ಗಂಡುಹೆಣ್ಣುಗಳ ಸಂಬಂಧವನ್ನು ಒಪ್ಪಿಕೊಂಡಿರುವಂತೆ ಗಂಡುಗಂಡುಗಳ ಸಂಬಂಧವನ್ನೂ ಒಪ್ಪಿಕೊಂಡು ಮದುವೆಯಾಗುವುದು ರೂಢಿಯಲ್ಲಿದ್ದರೆ ಹೇಗಿರುತ್ತಿತ್ತು?' ಅವನು ಎತ್ತಲೋ ನೋಡುತ್ತ ನಿಟ್ಟುಸಿರುಬಿಟ್ಟ. 'ಬಿಂದಾಸಾಗಿ ಸುಖವಾಗಿರುತ್ತಿದ್ದೆ. ಹೆಣ್ಣನ್ನು ಮದುವೆಯಾಗಿ ಒದ್ದಾಡುವ ಪ್ರಸಂಗವೇ ಬರುತ್ತಿರಲಿಲ್ಲ!'

ಇಬ್ಬಂದಿತನಕ್ಕೆ ಪರಿಹಾರದ ಹಾದಿ ಹೊಳೆಯಿತು!

'ಹಾಗಾದರೆ, ಈಗಲಾದರೂ ನಿಮ್ಮ ಸಲಿಂಗದ ನಿಲುವಿಗೆ ಹೆಂಡತಿಯನ್ನೂ ಹಿರಿಯರನ್ನೂ ಒಪ್ಪಿಸಿದರೆ ನೀವು ಸುಖವಾಗಿರಲು ಸಾಧ್ಯವಿದೆ, ಅಲ್ಲವೆ?' ಎಂದೆ. ಅವನು ನಂಬಲಾಗದೆ ನನ್ನ ಮುಖ ನೋಡಿದ.

ಮುಂದಿನ ಒಂದು ಗಂಟೆಯ ಕಾಲ ತುರುಸಿನ ಚರ್ಚೆ ನಡೆಯಿತು. ಸಲಿಂಗಿಯ ಹೆಂಡತಿಗೆ ವಿಷಯ ಹೇಗೆ ತಿಳಿಸುವುದು, ಎರಡೂ ಕಡೆಯ ಹಿರಿಯರನ್ನು ಹೇಗೆ ಮನವೊಲಿಸುವುದು, ತಲೆಯೆತ್ತುವ ತಪ್ಪು ತಿಳಿವಳಿಕೆಗಳನ್ನು ಹೇಗೆ ನಿವಾರಿಸುವುದು ಎನ್ನುವುದರ ಬಗೆಗೆ ವಿವರವಾಗಿ ಮಾತಾಡಿದೆವು. ಸಲಿಂಗಿಯ ಮಗುವಿನ ಭವಿಷ್ಯದ ಮಾತು ಬಂದಾಗ ಹೇಳಿದೆ: 'ಗಂಡನ ಸ್ಥಾನವನ್ನು ಬಿಟ್ಟುಕೊಟ್ಟರೂ ತಂದೆತನವನ್ನು ಬಿಟ್ಟುಕೊಡುವ ಪ್ರಶ್ನೆ ಬರುವುದಿಲ್ಲವಲ್ಲ? ಹಾಗಾಗಿ ನೀವು ಮಗುವಿನ ತಂದೆಯಾಗಿಯೇ ಉಳಿಯುತ್ತೀರಿ!' ಇದು ಅವನಿಗೆ ಇಷ್ಟವಾಯಿತು. ಅವನ ಕುಟುಂಬಕ್ಕೆ ಹಲವು ಸುತ್ತು ಆಪ್ತಸಲಹೆ ನೀಡುವ ಯೋಜನೆ ಮುಂದಿಟ್ಟ ನಂತರ ಅವನಿಗೆ ಸ್ವಲ್ಪ ಸಮಾಧಾನವಾಯಿತು. ಆದರೂ ಬೀಳ್ಕೊಡುವಾಗ ಅವನ ಹೃದಯ ಭಾರವಾಗಿತ್ತು. ಯಾಕೆ?

ಸಲಿಂಗಿಗಳ ಸತ್ಯವನ್ನು ಸಮಾಜವು ಒಪ್ಪಿಕೊಂಡು ಅವರಷ್ಟಕ್ಕೆ ಅವರನ್ನು ಬದುಕಲು ಬಿಟ್ಟೀತೆ?

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.**